ಸಂಪಾದಕೀಯ

# ಇತಿಹಾಸ ಮತ್ತು ಅವತಾರಪುರುಷರು

## ಬದುಕನ್ನು ಶ್ರೀಮಂತಗೊಳಿಸುವ ಮಹಾಪುರುಷರು

ಮಾನವ ಸಂಘಜೀವಿ. ಇತರರಿಂದ ಕಲಿಯುವ ಪ್ರಕ್ರಿಯೆ ಮಾನವನ ಸಹಜ ಗುಣ. ಮಕ್ಕಳು ತಂದೆತಾಯಿಯರನ್ನು ಗಮನಿಸಿ ಹಾವ-ಭಾವ ಹಾಗೂ ಮಾತಾಡುವ ಕಲೆಗಳನ್ನು ಕಲಿಯುವಂತೆ ವಯಸ್ಕರಾದಾಗಲೂ ಈ ಪ್ರಕ್ರಿಯೆ ಮುಂದುವರಿಯುತ್ತದೆ. ನಮ್ಮ ಸಂಪರ್ಕದ ವಲಯ ಬೆಳೆದಷ್ಟೂ ಬೌದ್ಧಿಕ ಬೆಳವಣಿಗೆಯೂ ತ್ವರಿತವಾಗುತ್ತದೆ. ಆದ್ದರಿಂದಲೇ ಒಬ್ಬ ವ್ಯಕ್ತಿಯ ಸ್ವಭಾವವನ್ನು ಅರಿಯಬೇಕಾದರೆ ಅವನ ಸಂಗಾತಿಗಳನ್ನೂ ಸ್ನೇಹಿತರ ವಲಯವನ್ನೂ ಗಮನಿಸು ಎಂಬ ನಾಣ್ನುಡಿ ಪ್ರಚಲಿತವಾಗಿರುವುದು. ಪುಸ್ತಕಗಳಿಂದ ಬರುವ ಜ್ಞಾನಕ್ಕಿಂತ ಇತರ ವ್ಯಕ್ತಿಗಳ ನೇರ ಸಂಪರ್ಕದಿಂದ ಬರುವ ಜ್ಞಾನ ಹೆಚ್ಚು ಪರಿಣಾಮಕಾರಿ ಎಂದು ಮನೋವಿಜ್ಞಾನವೂ ಕೂಡ ತಿಳಿಸುತ್ತದೆ. ಪ್ರತಿಯೊಬ್ಬ ಮಾನವನೂ ಮಾದರಿ ವ್ಯಕ್ತಿಗಳನ್ನು(role models) ಬಯಸಿ ಅಂತಹ ವ್ಯಕ್ತಿ ದೊರೆತಾಗ ಅವನಂತೆ ಆಗಲು ಬಯಸುತ್ತಾನೆ. ಇದು ಪ್ರಾಣಿಗಳಲ್ಲೂ ಇರುವ ನಾಯಕನನ್ನು ಅನುಸರಿಸುವ (follow the leader) ಸ್ವಭಾವ ಲಕ್ಷಣ. ಈ ಸ್ವಭಾವದ ಬಲದಿಂದ ಆದರ್ಶಗಳು ವ್ಯಕ್ತವಾಗಿರುವ ಮಾನವನನ್ನು ನಾವು ಕಾಣಲು ಬಯಸುತ್ತೇವೆ. ಅಂತಹ ವ್ಯಕ್ತಿಗಳನ್ನು ಕಂಡಾಗ ನಾವೂ ಅವರಂತೆ ಆಗಬಹುದು ಎಂಬ ವಿಶ್ವಾಸ ನಮ್ಮಲ್ಲಿ ಮೂಡುತ್ತದೆ.

ಪ್ರತಿಯೊಬ್ಬ ಮಾನವನಲ್ಲೂ ಈ ಉತ್ತಮಿಕೆಯ ಬಯಕೆ ಇರುತ್ತದೆ. ಹೊಸದನ್ನು ಸಾಧಿಸಿದಾಗ, ಕಷ್ಟವನ್ನು ಎದುರಿಸಿ ಜಯಗಳಿಸಿದಾಗ ಮಾನವನ ಸೃಜನಶೀಲತೆ ಹಾಗೂ ಕ್ರಿಯಾತ್ಮಕ ಶಕ್ತಿಗಳು ವ್ಯಕ್ತವಾಗಿ ಆನಂದದ, ಪರಿಪೂರ್ಣತೆಯ ಅನುಭವವಾಗುತ್ತದೆ. ಜೀವನದ ಸಂಕಷ್ಟಗಳನ್ನು ಎದುರಿಸಿ ಪ್ರಗತಿಯತ್ತ ನಡೆಯಲು ಮಾನವ ಈ ಕ್ರಿಯಾತ್ಮಕ ಶಕ್ತಿಯನ್ನು ಅನಾದಿ ಕಾಲದಿಂದಲೂ ಬಳಸಿಕೊಂಡಿದ್ದಾನೆ. ಯಾರಲ್ಲಿ ಇದು ಹೆಚ್ಚು ಅಭಿವ್ಯಕ್ತವಾಗುವುದೋ

> ಅವತಾರ ಇತಿಹಾಸವನ್ನು ಸೃಷ್ಟಿಸುತ್ತಾನೆ; ಇತಿಹಾಸವು ಅವತಾರನ ಆಗಮನಕ್ಕೆ ಸಿದ್ಧತೆಯನ್ನು ಮಾಡುತ್ತದೆ.
>
> — ಮಹೇಂದ್ರನಾಥ ಗುಪ್ತ



ಅವರು ಅಸಾಮಾನ್ಯತೆಯನ್ನು ಮೆರೆಯುತ್ತಾರೆ; ಮಾನವನ ಪ್ರಗತಿಗೆ ಕಾರಣರಾಗುತ್ತಾರೆ. ಇತಿಹಾಸವನ್ನು ಪರಿಶೀಲಿಸಿದಾಗ ಪ್ರತಿಯೊಂದು ದೇಶದಲ್ಲೂ ಪ್ರತಿಯೊಂದು ಕಾಲದಲ್ಲೂ ಪ್ರತಿಯೊಂದು ಕ್ಷೇತ್ರದಲ್ಲೂ ಅಸಂಖ್ಯ ಮಹಾಪುರುಷರು ವಿಶೇಷತೆಯನ್ನು ಮೆರೆದು ಗಣನೀಯ ಪರಿಣಾಮವನ್ನು ಬೀರಿರುವುದು ಕಂಡುಬರುತ್ತದೆ. ಮಾನವನ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಜೀವನಗಳೆಲ್ಲವೂ ಈ ವ್ಯಕ್ತಿಗಳ ವಿಚಾರಗಳಿಂದ ಪ್ರಭಾವಿತವಾಗಿದ್ದು ಪ್ರತಿ ದಶಕದಲ್ಲೂ ಜೀವನದ ಶೈಲಿಯೇ ಬದಲಾಗುತ್ತಿರುತ್ತದೆ. ವಿಜ್ಞಾನ ಹಾಗೂ ತಂತ್ರಜ್ಞಾನಗಳ ಅದ್ಭುತ ಪ್ರಗತಿಯಿಂದ ನಾಳೆಯ ಪ್ರಪಂಚ ಹೇಗಿರುತ್ತದೆ ಎಂದು ಊಹಿಸುವುದೂ ಕಷ್ಟವಾಗುತ್ತಿದೆ. ಇಂತಹ ಪರಿವರ್ತನೆಯನ್ನು ಸಾಧ್ಯಮಾಡಿರುವ ವ್ಯಕ್ತಿಗಳನ್ನು ಮಹಾಪುರುಷರೆಂದು ಕರೆಯುವುದರಲ್ಲಿ ಆಶ್ಚರ್ಯವೇನು? ತಾತ್ಕಾಲಿಕವಾಗಿಯಾದರೂ, ಒಂದು ಕ್ಷೇತ್ರದಲ್ಲಿಯೇ ಆದರೂ, ಒಂದು ಸಮಾಜದ ಮೇಲೆ ಒಬ್ಬ ವ್ಯಕ್ತಿ ಸುಧಾರಣೆ, ಬದಲಾವಣೆಯನ್ನು ತರಲು ಪ್ರಯತ್ನಿಸಿ, ಜೀವನವನ್ನು ಮತ್ತಷ್ಟು ಅರ್ಥಪೂರ್ಣವನ್ನಾಗಿಸಿದ್ದರೆ, ಶಾಂತಿಯುತವನ್ನಾಗಿಸಿದ್ದರೆ ಅವನು ಮಹಾನುಭಾವನೇ ಸರಿ. ಇತಿಹಾಸವೆಂದರೆ ಇಂತಹ ವ್ಯಕ್ತಿಗಳ ಜೀವನ ಕೃತಿಗಳ ಅಧ್ಯಯನವಷ್ಟೇ! ಪ್ರತಿಯೊಂದು ಬದಲಾವಣೆ, ಸುಧಾರಣೆಯ ಹಿಂದೆ ಒಬ್ಬ ವ್ಯಕ್ತಿಯ ಜೀವನ, ಕೃತಿ ಇರಲೇಬೇಕು. ಇತಿಹಾಸ ಕೇವಲ ಇದೆಲ್ಲದರ ದಾಖಲೆ.

## ವಿಚಾರಪೂರ್ಣವಾದ ಅನುಸರಣೆ ಬೇಕು, ಅಂಧಾನುಕರಣೆಯಲ್ಲ

ಈ ಮಹಾಪುರುಷರು ನಮಗೆ ಆದರ್ಶಪ್ರಾಯರು. ಸಾಧನೆ, ತ್ಯಾಗ, ಆಕಾಂಕ್ಷೆ, ಧೀರತನ, ಸತ್ಯನಿಷ್ಠೆ, ಅನುಕಂಪೆಯಂತಹ ಶ್ರೇಷ್ಠವಾದ ಮೌಲ್ಯಗಳಿಂದ ಇವರ ಜೀವನ ತುಂಬಿರುತ್ತದೆ. ಇವರನ್ನು ಅನುಸರಿಸಲು ಬಯಸುವುದೂ ಕೂಡ ಸಹಜವೆ ಆದ

ನಡವಳಿಕೆ. ಅನುಸರಣೆಗೂ ಅಂಧಾನುಕರಣೆಗೂ ವ್ಯತ್ಯಾಸವಿದೆ. ಅನುಸರಣೆಯಲ್ಲಿ ಇತರರಲ್ಲಿರುವ ಗುಣಗಳನ್ನು ಮೆಚ್ಚಿ ಅದನ್ನು ನಮ್ಮ ವ್ಯಕ್ತಿತ್ವದೊಂದಿಗೆ ರೂಢಿಸಿಕೊಳ್ಳುವ ಪ್ರಕ್ರಿಯೆಯಿರುತ್ತದೆ. ಆದರೆ ನಾಯಕನಂತೆ ನಡೆಯಬೇಕು, ಮಾತನಾಡಬೇಕು, ಬಟ್ಟೆ ಧರಿಸಬೇಕು, ಎಂಬ ಆಚರಣೆ ಅಂಧಾನುಕರಣೆಯಾಗುವುದು.

ಒಬ್ಬ ನಾಯಕನನ್ನು ಸುಮ್ಮನೆ ಅನುಕರಿಸುವುದರ ಮೂಲಕ ತಮ್ಮ ವ್ಯಕ್ತಿತ್ವಕ್ಕೆ ಘನತೆಯನ್ನು ತಂದುಕೊಳ್ಳಬಹುದು ಎಂದು ಕೆಲವರು ಭಾವಿಸುವುದುಂಟು. ಆದರೆ ಅನುಕರಣೆಯ ಉತ್ಸಾಹದಲ್ಲಿ ವ್ಯಕ್ತಿ ತನ್ನ ವೈಯಕ್ತಿಕ ಪ್ರತಿಭೆ, ಸಾಮರ್ಥ್ಯಗಳ ಸಂವರ್ಧನೆಯನ್ನು ಮರೆಯುವುದು ಅವನ ಬೆಳವಣಿಗೆಗೆ ಮಾರಕವಾಗುತ್ತದೆ. ಸ್ಫೂರ್ತಿಗಾಗಿ ನಾಯಕರನ್ನು ಬಯಸುವುದು ಸರಿಯೇ ಆದರೂ ಅವರಲ್ಲಿರುವ ಆದರ್ಶಗಳನ್ನು, ಗುಣಗಳನ್ನು ನಮ್ಮದಾಗಿಸಿಕೊಂಡಾಗ ಮಾತ್ರ ನಾವು ಬೆಳೆಯುತ್ತೇವೆ. ಇಲ್ಲದಿದ್ದರೆ ವ್ಯಕ್ತಿತ್ವ ಕುಂಠಿತವಾಗಿ ಸತ್ವಹೀನವಾದ ಪ್ರತಿಬಿಂಬದಂತೆ ಆಗಿಬಿಡುತ್ತದೆ. ಆದ್ದರಿಂದ ನಾಯಕರು ಇರಬೇಕು, ಆದರ್ಶವನ್ನು ಜೀವಂತಗೊಳಿಸಿದ ಮಹನೀಯರು ಇರಬೇಕು, ಹಾಗೂ ಅವರನ್ನು ಅನುಸರಿಸುವ ಜನರೂ ಇರಬೇಕು. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ:

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥ (೩.೨೧)

"ಶ್ರೇಷ್ಠನಾದವನು ಯಾವಯಾವುದನ್ನು ಆಚರಿಸುವನೋ ಅದನ್ನೇ ಉಳಿದ ಜನರೂ ಮಾಡುವುದು. ಆತನು ಯಾವುದನ್ನು ಪ್ರಮಾಣವೆನ್ನುವನೋ ಲೋಕವು ಅದನ್ನೇ ಅನುಸರಿಸುವುದು."

ಅನುಕರಣೆ ಮನುಷ್ಯನ ಒಂದು ಮೂಲಭೂತ ಪ್ರವೃತ್ತಿಯಾದುದರಿಂದ ಹಿರಿಯರು ತಮ್ಮ ನಡವಳಿಕೆಯ ಬಗ್ಗೆ ಎಷ್ಟು ಜಾಗರೂಕರಾಗಿದ್ದರೆ ಅಷ್ಟೂ ಉತ್ತಮ. ಕಿರಿಯರು ಹಿರಿಯರನ್ನು ಕಂಡು ಅವರಂತೆ ವರ್ತಿಸುವುದು ಸರ್ವವಿದಿತ. ಮಕ್ಕಳ ಭವಿಷ್ಯವನ್ನು ರೂಪಿಸುವ ತಂದೆತಾಯಿಯರ ಜವಾಬ್ದಾರಿಯಂತೆಯೇ ಗಂಭೀರವಾದ ಜವಾಬ್ದಾರಿ ನಾಯಕರ ಮೇಲೂ ಇದೆ. ಪ್ರಸಿದ್ಧ ವ್ಯಕ್ತಿಗಳ ಹೇಳಿಕೆಗಳು, ನಡತೆ, ನೂರಾರು ಜನರ ಮನಸ್ಸಿನ ಮೇಲೆ ಪ್ರಭಾವ ಬೀರುವುದರಿಂದ ಈ ವಿಷಯದಲ್ಲಿ ವಿವೇಚನೆ ಬಹಳ ಮುಖ್ಯವಾಗುತ್ತದೆ.

### ಲೌಕಿಕ ಸಾಧನೆಗಳು

ಮತ್ತೊಂದು ಗಮನೀಯ ಅಂಶವೆಂದರೆ ಕಾಲದ ಗತಿಯಲ್ಲಿ ನಾವು ಸಾಧಿಸಿದ ಅಸಾಮಾನ್ಯ ಕ್ರಿಯೆಯೂ ಕೂಡ ಸಾಮಾನ್ಯವಾಗಿಬಿಡುತ್ತದೆ. ಪ್ರತಿಯೊಂದು ಕ್ಷೇತ್ರದಲ್ಲೂ ಪ್ರಗತಿಯಾಗುತ್ತಿದ್ದು ಮಾನವನ ಬೌದ್ಧಿಕ ವಿಕಾಸವಾದಂತೆ ಹಿಂದಿನ ಸಾಧನೆಗಳೆಲ್ಲ ನಗಣ್ಯವಾಗಿ ಪ್ರಾಸಂಗಿಕತೆಯನ್ನು ಕಳೆದುಕೊಳ್ಳುವುದೂ ಉಂಟು. ಉದಾಹರಣೆಗೆ ವಿಜ್ಞಾನದ ಕ್ಷೇತ್ರದಲ್ಲಿ ಇಂದು ಚಾಲನೆಯಲ್ಲಿರುವ ವಿಚಾರಗಳು, ನಿರ್ಣಯಗಳು ಹಿಂದಿನದನ್ನು ಆಧರಿಸಿದ್ದರೂ ಅದಕ್ಕೆ ಭಿನ್ನವಾಗಿವೆ. ಸಾಮಾಜಿಕ ರಚನೆಯಲ್ಲೂ ಹಿಂದಿನ

> ಶ್ರೀರಾಮಕೃಷ್ಣರು ಶ್ರೇಯಸ್ಕರವಾದ ಶಾಶ್ವತ ಮೌಲ್ಯವನ್ನು ನಮಗೆ ತೋರಿಸಿಕೊಟ್ಟಿದ್ದಾರೆ. ಅವರ ನುಡಿಗಳು ಇಂದು ನಮಗೆ ಅತ್ಯಂತ ಪ್ರಸ್ತುತ ಮತ್ತು ಅದರಲ್ಲಿ ಸಂದೇಹಕ್ಕೆ ಆಸ್ಪದವೇ ಇಲ್ಲ. ಆಧ್ಯಾತ್ಮಿಕತೆಯನ್ನು ತಪ್ಪಾಗಿ ತಿಳಿದು ವಿಡಂಬನೆ ಮಾಡುವ ಜನರಿಗೆ ಉತ್ತರವಾಗಿ ಪ್ರಜ್ವಲವಾದ ಸಕಾರಾತ್ಮಕವಾದ ದೃಢೀಕರಣವಾಗಿದೆ ಶ್ರೀರಾಮಕೃಷ್ಣರ ಅಮೂಲ್ಯ ಜೀವನ.
>
> — ನಿಕೋಲಸ್ ಡಿ. ರೋರಿಚ್ (Nicholas De Roerich)

ರಾಜಮಹಾರಾಜರ ಯುದ್ಧ, ಗೆಲುವುಗಳೆಲ್ಲ ಇಂದು ತಮ್ಮ ಮೋಡಿಯನ್ನು ಕಳೆದುಕೊಂಡಿವೆ. ಮಾನವರೆಲ್ಲ ಒಂದು ಕುಟುಂಬ ಎಂಬ ಭಾವನೆ ಇಂದು ಬೆಳೆಯುತ್ತಿದೆ. ಆದ್ದರಿಂದ **ಕಾಲೋ ಜಗದ್ಭಕ್ಷಕಃ** (ಕಾಲವು ಜಗತ್ತನ್ನೇ ಕಬಳಿಸುವುದು) ಎಂಬುದು ಎಷ್ಟು ಸತ್ಯವೆಂದು ಅರಿವಾಗುತ್ತದೆ. ನಾವು ಇಂದು ನಮ್ಮೊಡನಿರುವ ಯಾವ ವ್ಯಕ್ತಿಯನ್ನು ಗೌರವಿಸಿ, ಸನ್ಮಾನಿಸಿ, ಮಹಾಪುರುಷ ಎಂದು ಕೊಂಡಾಡುವೆವೋ ಆ ವ್ಯಕ್ತಿಯ ಹೆಸರು ಇನ್ನು ಕೆಲವು ದಶಕಗಳ ನಂತರ ಯಾರ ಸ್ಮೃತಿಯಲ್ಲೂ ಉಳಿಯುವುದಿಲ್ಲ. ಲಕ್ಷಾಂತರ ಹೆಸರುಗಳಲ್ಲಿ ಅದೂ ಒಂದು ಹೆಸರಾಗಿಬಿಡುತ್ತದೆ. ಒಂದೆರಡು ಪೀಳಿಗೆಯ ನಂತರ ಆ ಹೆಸರು ಆಸಕ್ತಿಯನ್ನು ಕೆರಳಿಸದೆ ಇರಬಹುದು.

### ಇತಿಹಾಸಕ್ಕೆ ಚಾಲನೆ ನೀಡುವ ಅವತಾರ ಪುರುಷರು

ಆದರೆ ಕೆಲವು ಮಹಾಪುರುಷರು ಈ ನಿಯಮಕ್ಕೆ ಅತೀತವಾಗಿರುವುದು ಕಂಡುಬರುತ್ತದೆ. ಲೌಕಿಕ ದೃಷ್ಟಿಯಿಂದ ಯಾವುದೇ ಮಹತ್ತರವಾದ ಸಾಧನೆಯನ್ನು ಮಾಡದೇ ಇದ್ದರೂ ಕ್ರಿಸ್ತ, ಬುದ್ಧ, ರಾಮಕೃಷ್ಣರಂತಹ ಮಹಾಪುರುಷರ ಪ್ರಭಾವ ಹಾಗೂ ವ್ಯಾಪ್ತಿ ಕಾಲಕ್ರಮೇಣ ಬೆಳೆಯುತ್ತಲೇ ಇರುವುದನ್ನು ಗಮನಿಸಬಹುದಾಗಿದೆ. ತಮ್ಮ ಜೀವಿತಾವಧಿಯಲ್ಲಿ ಅವರು ಅಜ್ಞಾತರೇ ಆಗಿದ್ದರೂ, ಅನಾಮಧೇಯರಾಗಿದ್ದು ಕೆಲವೇ ಜನರಿಗೆ ಅವರ ಪರಿಚಯವಾಗಿದ್ದರೂ, ದಿನಕಳೆದಂತೆ ಅವರನ್ನು ಅನುಸರಿಸುವವರ ಸಂಖ್ಯೆ ಏರುತ್ತಲೇ ಇರುವುದು ಆಶ್ಚರ್ಯಕರ! ಅವರು ಸಾಧಿಸಿದ ಆಧ್ಯಾತ್ಮಿಕ ಅನುಭೂತಿ ಹಾಗೂ ಅದನ್ನು ಅಪಾರ ಕರುಣೆಯಿಂದ ಜನಸಾಮಾನ್ಯರಿಗೆ, ಅವರಿಗೆ ಅರ್ಥವಾಗುವಂತಹ ಭಾಷೆಯಲ್ಲಿ ತಿಳಿಸುವುದರ ಮೂಲಕ ಜಗತ್ತಿನಲ್ಲಿರುವ ಗೊಂದಲ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಅವರು ಆಸರೆ ಆಗಿರುವುದೇ ಇದಕ್ಕೆ ಕಾರಣವೆನ್ನಬಹುದು. ಅವರು ಕಂಡು, ಅನುಭವಿಸಿ, ಬೋಧಿಸಿದ ಆಧ್ಯಾತ್ಮಿಕ ಸತ್ಯಗಳು ತಮ್ಮ ನವೀನತೆಯನ್ನು ಕಳೆದುಕೊಂಡಿಲ್ಲ. ಇಂದಿಗೂ ಕ್ರಿಸ್ತ, ಬುದ್ಧ, ರಾಮಕೃಷ್ಣರಿಂದ ಪ್ರೇರೇಪಣೆಯನ್ನು ಪಡೆದು ಜೀವನದಲ್ಲಿ ಆಶಾಕಿರಣವನ್ನು ಕಾಣುತ್ತಿರುವ ನೂರಾರು ವ್ಯಕ್ತಿಗಳನ್ನು ನಾವು ಕಾಣಬಹುದು. ಇಂತಹ ಮಹಾಪುರುಷರು ಕಾಲಾತೀತರಾಗಿ ಬೆಳೆದು ಕಾಲದ ಗತಿಯನ್ನೇ ಬದಲಿಸಬಲ್ಲಂತಹ ಅಪಾರವಾದ ಶಕ್ತಿ ಸಾಮರ್ಥ್ಯ

ವನ್ನು ಹೊಂದಿರುತ್ತಾರೆ. ಇವರನ್ನೇ ನಾವು 'ಅವತಾರ' ಎಂದು ಕರೆದು ಆರಾಧಿಸುತ್ತೇವೆ. ಇತರ ಮಹಾಪುರುಷರು ಮತ್ತು ಆಚಾರ್ಯರಿಗೂ ಇವರಿಗೂ ಇರುವ ವ್ಯತ್ಯಾಸ ಇದೇ.

**ಅವತಾರ ಪುರುಷರ ಬದುಕಿನ ತೀವ್ರತೆ**

ಸಾಮಾನ್ಯ ವ್ಯಕ್ತಿಗಳು ಒಂದು ಕಾರ್ಯವನ್ನು ಕೈಗೊಂಡಾಗ ಎಷ್ಟೊಂದು ಯೋಜನೆಗಳನ್ನು ರೂಪಿಸಿಕೊಂಡು ತಮಗಿರುವ ಅಲ್ಪ ಅವಧಿಯಲ್ಲೇ ಎಲ್ಲವನ್ನೂ ಸಾಧಿಸಬೇಕು ಎನ್ನುವಂತಹ ಹಂಬಲ, ಉದ್ವೇಗಗಳನ್ನು ವ್ಯಕ್ತಪಡಿಸಿದರೆ, ಅವತಾರ ಪುರುಷರು ಅತ್ಯಂತ ಸಹಜವಾಗಿಯೇ ಯಾವುದೆ ತೋರಿಕೆ, ಆಡಂಬರವಿಲ್ಲದೆ ಮಹತ್ತರವಾದ ಸಾಧನೆಯನ್ನು ಕೆಲವೇ ವರ್ಷಗಳಲ್ಲಿ ಸಾಧಿಸುವರು. ಎಲ್ಲವೂ ಅವರಿಗೆ ಅನುಕೂಲಕರವಾಗಿದ್ದು, ಅವರು ಸಮಸ್ಯೆಗಳನ್ನು ಲೀಲಾಜಾಲವಾಗಿ ಜಯಿಸುವಂತೆ ತೋರುವುದು. ಅವರೆಲ್ಲ ಅತಿಮಾನುಷ ಶಕ್ತಿಯನ್ನು ಹೊಂದಿರುವರು, ನಮಗೂ ಅವರಿಗೂ ಹೋಲಿಕೆ ಸಲ್ಲದು ಎಂದು ಜನ ಅವರನ್ನು ಕೇವಲ ಆರಾಧ್ಯ ಮೂರ್ತಿಗಳನ್ನಾಗಿ ಇರಿಸಿ, ಪೂಜೆ ಸಲ್ಲಿಸಿ ತಮ್ಮ ಜೀವನದಲ್ಲಿ ಅವರ ಪ್ರವೇಶವಾಗದಂತೆ ಬಂದೋಬಸ್ತು ಮಾಡಿಕೊಳ್ಳುತ್ತಾರೆ. ಆದರೆ ಪ್ರತಿಯೊಬ್ಬ ಮಾನವನೂ ಕೂಡ ಪ್ರಯತ್ನದ ಮೂಲಕ, ಸಾಧನೆಯ ಮೂಲಕ ದೈವತ್ವದ ಹಂತಕ್ಕೆ ಏರಬಹುದು ಎಂಬುದನ್ನು ತೋರಿಸುವುದಕ್ಕಾಗಿಯೇ ಬರುವ ಈ ಅವತಾರ ಪುರುಷರು "ನನ್ನನ್ನು ಅನುಸರಿಸಿ, ನೀವೂ ನನ್ನಂತೆ ಆಗಬಹುದು" ಎಂಬ ಭರವಸೆಯನ್ನು ನೀಡುತ್ತಾರೆ.

**ಶ್ರೀರಾಮಕೃಷ್ಣರ ಕೊಡುಗೆ**

ಮಾನವನು ಸ್ವಾರ್ಥಸಾಧನೆಗಾಗಿ ಎಲ್ಲ ಮೌಲ್ಯಗಳನ್ನೂ ಕಡೆಗಣಿಸಿ ವಸ್ತುಸಂಗ್ರಹಣೆಯಿಂದಲೇ ಸುಖ ಎಂದು ನಂಬಿದಾಗ ಇಂತಹ ಅವತಾರ ಪುರುಷರು, ಯಾವುದೇ ವ್ಯಕ್ತಿ ಅಥವಾ ವಸ್ತುವಿನಲ್ಲಿ ಆಸಕ್ತಿಯನ್ನು ಇಟ್ಟುಕೊಳ್ಳದೆ ಮಾನವೀಯತೆ, ಸತ್ಯ, ದಯೆ ಹಾಗೂ ಶುದ್ಧವಾದ ಪ್ರೀತಿಗಳಂತಹ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಭಿವ್ಯಕ್ತಗೊಳಿಸಿ ಸಮಾಜದಲ್ಲಿ ಸಮತೆಯನ್ನು ತರುತ್ತಾರೆ. "ಈಶ್ವರನೊಬ್ಬನೇ ವಸ್ತು, ಉಳಿದುದೆಲ್ಲ ಅವಸ್ತು" ಎಂದು ಹೇಳುವ ಶ್ರೀರಾಮಕೃಷ್ಣರು ಸುಂದರ ಉದಾಹರಣೆಯ ಮೂಲಕ ಮೌಲ್ಯಗಳ ಮಹಿಮೆಯನ್ನು ಹೀಗೆ ತಿಳಿಸಿಕೊಡುತ್ತಾರೆ: "ಕೇವಲ ಸೊನ್ನೆಗಳ ನಂತರ ಎಷ್ಟೇ ಸೊನ್ನೆಗಳನ್ನೇ ಬರೆಯುತ್ತಾ ಹೋದರೂ ಅದಕ್ಕೆ ಯಾವುದೇ ಮೌಲ್ಯವಿರುವುದಿಲ್ಲ. ಆದರೆ ಆ ಸೊನ್ನೆಗಳ ಮೊದಲಿಗೆ ಒಂದನ್ನು ಬರೆದರೆ ಆಗ ಪ್ರತಿಯೊಂದು ಸೊನ್ನೆಯ ಮೌಲ್ಯವೂ ಹೆಚ್ಚುತ್ತಾ ಹೋಗುವುದು." ಬರೀ ಹೊಟ್ಟೆಪಾಡಿಗಾಗಿಯೇ ಪಾಂಡಿತ್ಯ, ನೈಪುಣ್ಯಗಳನ್ನು ಬೋಧಿಸುವ ಶಿಕ್ಷಣಕ್ರಮವನ್ನು ತಿರಸ್ಕರಿಸಿದ ಶ್ರೀರಾಮಕೃಷ್ಣರು ತಮ್ಮ ಬಾಲ್ಯದಲ್ಲಿಯೇ 'ಏಕಗ್ರಾಹಿ'ಯಾಗಿ ಸಾಧನೆಯಲ್ಲಿ ಮುಳುಗಿ ಅನರ್ಘ್ಯ ರತ್ನಗಳನ್ನು ತಮ್ಮದಾಗಿಸಿಕೊಂಡರು.

ಅವತಾರ ಪುರುಷರು ಬದುಕಿಗೆ ಅಗತ್ಯವಾದ ಉದಾತ್ತವಾದ ಮೌಲ್ಯಗಳನ್ನು ಮತ್ತೆ ಸಮಾಜದಲ್ಲಿ ಚಲಾವಣೆಗೆ ತರುತ್ತಾರೆ.

> ಇನ್ನೂ ಐದುನೂರು ವರ್ಷಗಳ ಕಾಲ ಜಗತ್ತು ಶ್ರೀರಾಮಕೃಷ್ಣರಂತಹ ಮತ್ತೊಬ್ಬರನ್ನು ಕಾಣಬಯಸದು. ಅವರು ಬಿಟ್ಟು ಹೋಗಿರುವ ಅಗಾಧವಾದ ಚಿಂತನೆಯ ಸಂಪತ್ತನ್ನು ಮೊದಲು ಕಾರ್ಯಗತಗೊಳಿಸಬೇಕು; ಅವರಿಂದ ಹೊರಹೊಮ್ಮಿದ ಆಧ್ಯಾತ್ಮಿಕಶಕ್ತಿ ಕಾರ್ಯಸಿದ್ಧಿಯಲ್ಲಿ ಪರಿಣಮಿಸಬೇಕು. ಅಲ್ಲಿಯ ತನಕ ಮತ್ತಷ್ಟು ಬೇಕು ಎಂದು ಕೇಳಲು ನಮಗೆ ಅಧಿಕಾರ ಎಲ್ಲಿದೆ? ಹೆಚ್ಚಾಗಿ ಬರುವುದನ್ನು ಬಳಸುವುದಾದರೂ ಎಲ್ಲಿ?
>
> —ಶ್ರೀಅರವಿಂದರು

ಗ್ರಾಹಕ ಯುಗವೆಂದೇ ಪ್ರಸಿದ್ಧವಾಗಿರುವ ಇಂದಿನ ದಿನಗಳಲ್ಲಿ ವಸ್ತುಕೇಂದ್ರಿತವಾದ ಜ್ಞಾನದಲ್ಲೇ ವಿಶ್ವಾಸವಿರುವ ಮನಗಳಲ್ಲಿ ಬದುಕಿಗೆ ನಿಜವಾದ ಸಾರ್ಥಕತೆಯನ್ನು ತಂದುಕೊಡುವ ಆತ್ಮಕೇಂದ್ರಿತ ಪೂರ್ಣವ್ಯಕ್ತಿತ್ವದ ಚಿತ್ರಣವನ್ನು ಶ್ರೀರಾಮಕೃಷ್ಣ ಪರಮಹಂಸರು ಮೂಡಿಸುತ್ತಾರೆ. ವಸ್ತುಗಳಲ್ಲಿ ಸುಖವನ್ನು ಕಾಣುವ ಮಾನವನ ಮನಸ್ಸು ತನ್ನಲ್ಲಿ ತೃಪ್ತಿಯನ್ನು ಕಂಡುಕೊಳ್ಳದಿದ್ದರೆ ಸುಖವು ಮರೀಚಿಕೆಯಾಗಿಯೇ ಉಳಿಯುವುದು ಎಂಬುದನ್ನು ಶ್ರೀರಾಮಕೃಷ್ಣರ ಜೀವನ ತೋರಿಸಿಕೊಡುತ್ತದೆ. ಸುತ್ತಮುತ್ತಲಿನ ಜನರೆಲ್ಲರೂ ಹೊರಗಿನ ಪ್ರಪಂಚವನ್ನೇ ಸತ್ಯವೆಂದು ತಿಳಿದು ಅದರಲ್ಲಿ ಸುಖವನ್ನು ಕಾಣಲು ಬಯಸುತ್ತಿದ್ದಾಗ ಈ ಅವತಾರ ಪುರುಷರು ತಮ್ಮಲ್ಲಿ ಆ ಆನಂದದ ಅನುಭವವನ್ನು ಪಡೆದು ತಮ್ಮ ಸಾನ್ನಿಧ್ಯ ಮಾತ್ರದಿಂದಲೇ ಇತರರಿಗೂ ಶಾಂತಿ, ನೆಮ್ಮದಿಯನ್ನು ನೀಡುವ ಅಮೃತದ ಸ್ರೋತವಾದರು. ಇಂತಹ ವ್ಯಕ್ತಿಗಳನ್ನು ಉಪನಿಷತ್ತು 'ಧೀರರು' ಎಂದು ಕರೆಯುತ್ತದೆ. ಅಂತರಂಗದೆಡೆಗೆ ದೃಷ್ಟಿಯನ್ನು ತಿರುಗಿಸಿಕೊಂಡು ಅಮೃತತತ್ತ್ವವನ್ನು ಬಯಸುವ ಧೀರರಿವರು. ಅಪರಿಮಿತವಾದ ತ್ಯಾಗ ಇವರ ಜೀವನದ ಶ್ರುತಿಯಾಗಿತ್ತು.

ಇವತ್ತು ಶ್ರೀರಾಮಕೃಷ್ಣರ ಹೆಸರು ಧರ್ಮಸಮನ್ವಯಕ್ಕೆ ಪರ್ಯಾಯ ಪದವಾಗಿದೆ. ಎಲ್ಲ ಧರ್ಮಗಳ, ಮತಗಳ ಸಾರವನ್ನು ತಮ್ಮ ಜೀವನದಲ್ಲಿ ವ್ಯಕ್ತಗೊಳಿಸಿದ ಈ ಮಹಾನುಭಾವರು ತಮ್ಮದೇ ಆದ ಸುಂದರ ಉಪಮೆಯನ್ನು ಕೊಡುತ್ತಿದ್ದರು: "ನಾನು ಒಂದೇ ರಾಗವನ್ನು ಏಕೆ ನುಡಿಸಲಿ? ಬೇರೆ ಬೇರೆ ಸ್ವರಗಳನ್ನು ರಾಗಗಳನ್ನು ನುಡಿಸಲು ಬಯಸುತ್ತೇನೆ. ಭಗವಂತ ಅನಂತ ಭಾವಮಯ. ಅವನು ಇಷ್ಟೇ ಎಂದು ಹೇಳಿ ಅವನನ್ನೇಕೆ ಸೀಮಿತಗೊಳಿಸಬೇಕು?" ಇದು ಇವತ್ತು ನಮಗೆ ಬೇಕಾಗಿರುವ ಅತ್ಯಮೂಲ್ಯ ಸಂದೇಶ—ತ್ಯಾಗ ಹಾಗೂ ಪರಧರ್ಮಗಳಲ್ಲಿ ಗೌರವ. ಅವರ ವ್ಯಕ್ತಿತ್ವವನ್ನು ಕುರಿತು ಚಿಂತಿಸುವುದೇ ಧ್ಯಾನ. ಈ ಧ್ಯಾನದಿಂದ ಒಂದಂತೂ ನಿಶ್ಚಿತ—ನಮ್ಮಲ್ಲಿರುವ ಸಂಕುಚಿತ ದೃಷ್ಟಿ ಅಳಿದು ಜಾತಿ, ಮತ, ಕುಲ, ಗೋತ್ರ ಅಷ್ಟೇ ಏಕೆ ದೇಶ ಕಾಲಗಳನ್ನೂ ಮೀರಿ ನಿಲ್ಲುವ ವಿಶಾಲ ದೃಷ್ಟಿಯುಳ್ಳ ಮಾನವೀಯತೆ ನಮ್ಮದಾಗುತ್ತದೆ. (ಮುಂದುವರಿಯುತ್ತದೆ.)